


ಕಿದ್ವಾಯಿ ಸ್ಮಾರಕ ಆಸ್ಪತ್ರೆಯು ನಡೆಸಿದ ಸ್ತನ ಕ್ಯಾನ್ಸರ್ ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿ, ಜಾಗೃತಿ ಮೂಡಿಸಿದ ಕಿರುತೆರೆ ನಟಿ ನಯನಾ ನಾಗರಾಜ್ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಚಿತ್ರ: ಎಸ್‌.ಕೆ. ದಿನೇಶ್

## ಸಮಸ್ಯೆಗೆ ಜೀವನಶೈಲಿಯೂ ಕಾರಣ

ಯುವ ಸಮುದಾಯದಲ್ಲಿ ಸ್ತನ ಕ್ಯಾನ್ಸರ್ ವ್ಯಾಪಕವಾಗಿ ಹೆಚ್ಚುತ್ತಿದೆ ಎಂಬ ಆತಂಕಕಾರಿ ಅಂಶ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆ ಇತ್ತೀಚೆಗೆ ನಡೆಸಿದ ಅಧ್ಯಯನದಿಂದ ಸಾಬೀತಾಗಿದೆ. ಬದಲಾದ ಆಹಾರ ಪದ್ಧತಿ, ಜೀವನಶೈಲಿ ಹಾಗೂ ಹದಿಹರೆಯದ ಹುಡುಗಿಯರೂ ಧೂಮಪಾನ, ಮದ್ಯಪಾನದ ವ್ಯಸನ ಅಂಟಿಸಿಕೊಂಡಿರುವುದು ಇದಕ್ಕೆ ಕಾರಣ ಎಂಬುದನ್ನು ಅಧ್ಯಯನದ ಮೂಲಕ ವಿಶ್ಲೇಷಿಸಲಾಗಿದೆ.

ಕಿದ್ವಾಯಿ ಸಂಸ್ಥೆಯ ಅಧ್ಯಯನದ ಪ್ರಕಾರ, ರಾಜ್ಯದಲ್ಲಿ ವರದಿಯಾಗುತ್ತಿರುವ ಕ್ಯಾನ್ಸರ್ ಪ್ರಕರಣಗಳಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣ ಶೇ. 29.4 ರಷ್ಟಿದೆ. ಗರ್ಭಕಂಠದ ಗರ್ಭಾಶಯ ಕ್ಯಾನ್ಸರ್ ಶೇ. 10.8, ಶ್ವಾಸಕೋಶ ಕ್ಯಾನ್ಸರ್ ಶೇ. 9.4, ಅಂಡಾಶಯ ಕ್ಯಾನ್ಸರ್ ಶೇ. 7, ಉದರ ಹಾಗೂ ಮೂತ್ರನಾಳ ಕ್ಯಾನ್ಸರ್ ತಲಾ ಶೇ. 6.6ರಷ್ಟು ದೃಢಪಡುತ್ತಿದೆ. ಇನ್ನುಳಿದ ಕ್ಯಾನ್ಸರ್ ಪ್ರಮಾಣ ಶೇ. 6ಕ್ಕಿಂತ ಕಡಿಮೆಯಿದೆ.

ಸ್ತನದಲ್ಲಿ ಕಾಣಿಸಿಕೊಳ್ಳುವ ಗಡ್ಡೆಯಲ್ಲಿ ನೋವು ಕಾಣಿಸಿಕೊಳ್ಳುವುದು ಕಡಿಮೆ. ಹೀಗಾಗಿ ಮಹಿಳೆಯರು ಸ್ತನದ ಸಮಸ್ಯೆಯನ್ನು ಕಡೆಗಣಿಸುತ್ತಾರೆ. ಹೀಗಾಗಿ ಸ್ತನ ಕ್ಯಾನ್ಸರ್ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ ಎಂಬುದು ತಜ್ಞ ವೈದ್ಯರ ಅಭಿಪ್ರಾಯ.

## ಸಂಪೂರ್ಣ ಮಾರ್ಪಡಿಸಿದ ಸ್ತನ ಛೇದನ

ಸ್ತನ ಕ್ಯಾನ್ಸರ್ ಬಂದಾಗ ಅದರ ಹಂತವನ್ನು ಅನುಸರಿಸಿ, ವಿವಿಧ ರೀತಿಯ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಕೆಲವು ಶಸ್ತ್ರಚಿಕಿತ್ಸೆಗಳಲ್ಲಿ ಸ್ತನದಿಂದ ಗಡ್ಡೆಗಳನ್ನು ಹಾಗೂ ಕ್ಯಾನ್ಸರ್‌ಕಾರಕ ಅಂಶಗಳನ್ನು ಮಾತ್ರ ತೆಗೆದುಹಾಕಲಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಕ್ಯಾನ್ಸರ್‌ಪೀಡಿತ ಇಡೀ ಸ್ತನವನ್ನು ತೆಗೆಯಬೇಕಾಗುತ್ತದೆ. ಇದಕ್ಕೆ ಸಂಪೂರ್ಣ ಮಾರ್ಪಡಿಸಿದ ಸ್ತನ ಛೇದನ (Radical Mastectomy) ಎನ್ನಲಾಗುತ್ತದೆ. ಇಂದಿನ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಪದ್ಧತಿಯಲ್ಲಿ ಸರ್ಜರಿಯನ್ನು ಸುಧಾರಿತ ರೀತಿಯಲ್ಲಿ ಮಾಡಲಾಗುತ್ತದೆ. ಇದನ್ನು ಮಾರ್ಪಡಿಸಿದ ಶಸ್ತ್ರಚಿಕಿತ್ಸೆ ಎನ್ನುವರು.

ಸಾಮಾನ್ಯವಾಗಿ ಕ್ಯಾನ್ಸರ್‌ನ ಪ್ರಕಾರ ಹಾಗೂ ಅದರ ಹರಡುವಿಕೆಯ ಪ್ರಮಾಣವನ್ನು ಅನುಸರಿಸಿ, ಸಂಪೂರ್ಣ ಸ್ತನ ಛೇದನದ ನಿರ್ಧಾರವನ್ನು ಶಸ್ತ್ರಚಿಕಿತ್ಸಾ ತಜ್ಞರು ಕೈಗೊಳ್ಳುವರು. ಇಲ್ಲಿ ಮಹಿಳೆಯ ವಯಸ್ಸು, ಆರೋಗ್ಯ ಸ್ಥಿತಿ, ಮಾಸಿಕ ಚಕ್ರದ ಬಗೆಗಿನ ಮಾಹಿತಿ, ಗಡ್ಡೆಯ ಗಾತ್ರ, ಮಧುಮೇಹ, ಬಿಪಿಯಂತಹ ಜೀವನಶೈಲಿ ಕಾಯಿಲೆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಲಾಗುತ್ತದೆ. ಆ ನಂತರವೇ ಸೂಕ್ತ ಸ್ತನ ಛೇದನ ಪ್ರಕ್ರಿಯೆ ಮಾಡುವುದು ಪದ್ಧತಿ.

## ಶಾಶ್ವತ ವಿಕಾರ ಎನ್ನುವುದು ತಪ್ಪುಕಲ್ಪನೆ

ಕೆಲವೊಂದು ತಪ್ಪು ಕಲ್ಪನೆಗಳು ಸ್ತನ ಕ್ಯಾನ್ಸರ್ ಸುತ್ತ ತಳುಕು ಹಾಕಿಕೊಂಡಿವೆ. ಅಂಥ ಪೂರ್ವಗ್ರಹಗಳಲ್ಲಿ ಪ್ರಮುಖವಾದುದು, ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯು ಶಾಶ್ವತ ವಿಕಾರಕ್ಕೆ ಕಾರಣವಾಗುತ್ತದೆ ಎಂಬುದು. ಸ್ತನದಲ್ಲಿನ ಗಡ್ಡೆಯನ್ನು ತೆಗೆದುಹಾಕಲು ಶಸ್ತ್ರಚಿಕಿತ್ಸೆಗೆ ಒಳಗಾಗುವುದು ಅನಿವಾರ್ಯ. ಆದರೆ, ಪುನರ್ನಿರ್ಮಾಣ ಶಸ್ತ್ರಚಿಕಿತ್ಸೆಯ ಮೂಲಕ ಸ್ತನವನ್ನು ಉಳಿಸಿಕೊಳ್ಳಬಹುದು. ಸಮಾಲೋಚನೆಯ ಹೊರತಾಗಿಯೂ, ಹೆಚ್ಚಿನ ರೋಗಿಗಳು ಕ್ಯಾನ್ಸರ್ ಹಿಂತಿರುಗುವ ಭಯದಿಂದ ತಮ್ಮ ಸ್ತನಗಳನ್ನು ಸಂಪೂರ್ಣವಾಗಿ ತೆಗೆದುಹಾಕುವುದನ್ನು ಆರಿಸಿಕೊಳ್ಳುತ್ತಾರೆ.

ಬಹುತೇಕ ಸಂದರ್ಭಗಳಲ್ಲಿ ಅರಿವಿನ ಕೊರತೆಯಿಂದ ಹಾಗೂ ಭಯದಿಂದ ಸ್ತನ ಕ್ಯಾನ್ಸರ್ ಸಮಸ್ಯೆ ತೀವ್ರ ಸ್ವರೂಪ ಪಡೆದುಕೊಳ್ಳುವುದಿದೆ. ಹೆಣ್ಣುಮಕ್ಕಳಿಗೆ ಪ್ರೌಢಾವಸ್ಥೆಯಿಂದಲೇ ಸ್ತನಗಳ ಆರೋಗ್ಯದ ಕುರಿತು ಅರಿವು ಮೂಡಿಸುವುದು, ಸ್ತನ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಪ್ರಮುಖವಾದ ಘಟ್ಟ. ಸ್ತನ ಕ್ಯಾನ್ಸರ್‌ಗೆ ಒಳಗಾದ ಮಹಿಳೆಗೆ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಸಕಾರಾತ್ಮಕ ಬೆಂಬಲ ದೊರೆಯುವುದರಿಂದಾಗಿಯೂ, ಆಕೆ ಕ್ಯಾನ್ಸರ್ ವಿರುದ್ಧದ ಹೋರಾಟವನ್ನು ಆತ್ಮವಿಶ್ವಾಸದಿಂದ ಎದುರಿಸುವುದು ಸಾಧ್ಯವಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in